ಐತಿಹಾಸಿಕ ಸ್ಥಳಗಳ ಅಭಿವೃದ್ಧಿ

20 : (181)

ಶ್ರೀ ರಾಮಚಂದ್ರ ಎಸ್.ವಿ. (ಜಗಳೂರು) ವಿಧಾನಸಭಾ ಸದಸ್ಯರು

ಅ) ಜಗಳೂರು ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಎಷ್ಟು ಪುರಾತನ ಐತಿಹಾಸಿಕ ಪ್ರವಾಸಿ ಸ್ಥಳಗಳಿವೆ;

ಆ) ಈ ಪ್ರವಾಸಿ ಸ್ಥಳಗಳನ್ನು ಅಭಿವೃದ್ಧಿಪಡಿಸಲು ಸರ್ಕಾರದಿಂದ ಕೈಗೊಂಡ ಕ್ರಮಗಳೇನು; (ಸಂಪೂರ್ಣ ವಿವರ ನೀಡುವುದು)

ಇ) ಹಾಗಿಲ್ಲದಿದ್ದಲ್ಲಿ, ಈ ಪ್ರವಾಸಿ ಸ್ಥಳಗಳನ್ನು ಅಭಿವೃದ್ಧಿಪಡಿಸಲು ಯಾವಾಗ ಕ್ರಮ ಕೈಗೊಳ್ಳಲಾಗುವುದು?

ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಗಳು)

ಅ) ಜಗಳೂರು ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಪುರಾತನ ಐತಿಹಾಸಿಕ ಪ್ರವಾಸಿ ಸ್ಥಳಗಳು ಇರುವುದಿಲ್ಲ.
ಇಂತಹ ಪುರಾತನ ಐತಿಹಾಸಿಕ ಸ್ಥಳಗಳನ್ನು ಅವುಗಳ ರಚನೆ, ಪ್ರಾಚೀನತೆ, ಅವಧಿ ಹಾಗೂ ಐತಿಹಾಸಿಕ ಮಹತ್ವಗಳ ಮೇಲೆ ಭಾರತ ಪ್ರಾಚ್ಯವಸ್ತು ಹಾಗೂ ಸರ್ವೇಕ್ಷಣ ಇಲಾಖೆ ಮತ್ತು ರಾಜ್ಯ ಪ್ರಾಚ್ಯವಸ್ತು ಇಲಾಖೆಗಳು ಪರಿಶೀಲಿಸಿ ಘೋಷಿಸುತ್ತವೆ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಶ್ರೀ ರಾಮಚಂದ್ರ ಎಸ್.ವಿ. :- ಸನ್ಮಾನ್ಯ ಸಭಾಧ್ಯಕ್ಷರೆ, ನನ್ನ ಜಗಳೂರು ವಿಧಾನಸಭಾ ಕ್ಷೇತ್ರ ಅತಿ ಹಿಂದುಳಿದ ಕ್ಷೇತ್ರ. ಆದರೆ ಹಿಂದೆ ಗತ ವೈಭವದಲ್ಲಿ ಮೆರೆದಂತಹ ನಾಡು. ಈಗ ಏನಾಗಿದೆ ಎಂದರೆ ಬಹಳ ಚರಿತ್ರಾರ್ಹ ಪ್ರದೇಶಗಳಿವೆ. ಚಿತ್ರದುರ್ಗ ಪಾಳೇಗಾರರ ನಾಡು. ಅದು ಪ್ರವಾಸೋದ್ಯಮ ಇಲಾಖೆಗೆ ಸೇರಿದೆ. ಅದು ಅಲ್ಲದೆ ಕಲ್ಲದೇವನಪುರ. ಅಲ್ಲಿ ಕಲ್ಲೇಶ್ವರ ದೇವಸ್ಥಾನ ಇದೆ. 12ನೇ ಶತಮಾನದಲ್ಲಿ ಹೊಯ್ಸಳರು ಕಟ್ಟಿದ ನಾಡು. ಅದೂ ಅಲ್ಲದೆ ಕಣ್ವ ಕೊಪ್ಪಳ ಜವಳು ಮಠ. ಇದು ಕಣ್ವ ಮಹರ್ಷಿಗಳು ತಪಸ್ಸು ಮಾಡಿದ ಸ್ಥಳ. ಅದನ್ನು ಅಭಿವೃದ್ಧಿ ಪಡಿಸಬೇಕು. ಏಕೆಂದರೆ ಅದು ಅತಿ ಹಿಂದುಳಿದ ಪ್ರದೇಶ, ಹಿಂದುಳಿಯುತ್ತಲೇ ಇದೆ. ದಯಮಾಡಿ ಮುಖ್ಯಮಂತ್ರಿಗಳು ಪ್ರವಾಸೋದ್ಯಮ ಇಲಾಖೆಯನ್ನು ವಹಿಸಿಕೊಂಡಿದ್ದಾರೆ. ಈ ಪ್ರದೇಶದ ಅಭಿವೃದ್ಧಿ ಪಡಿಸಬೇಕೆಂದು ಸಭಾಧ್ಯಕ್ಷರ ಮೂಲಕ ನಾನು ಮನವಿ ಮಾಡುತ್ತೇನೆ.

ಶ್ರೀ ಡಿ.ವಿ. ಸದಾನಂದಗೌಡ :- ಸಭಾಧ್ಯಕ್ಷರೆ ವಿಶೇಷವಾಗಿ ಪುರಾತನ ಐತಿಹಾಸಿಕ ಸ್ಥಳಗಳೆಂದು ನಾವು ಗುರುತಿಸಬೇಕಾದರೆ ಅದು ನೂರಕ್ಕಿಂತ ಹೆಚ್ಚು ವರ್ಷ ಇತಿಹಾಸ ಇರುವಂಥದ್ದು ಆಗಿರಬೇಕು. ಈ ರೀತಿಯ ಯಾವುದೇ ಕ್ಷೇತ್ರಗಳು, ಪುರಾತನ, ಐತಿಹಾಸಿಕ ಪ್ರವಾಸಿ ಸ್ಥಳಗಳು ಜಗಳೂರಿನಲ್ಲಿ ಇರುವುದಿಲ್ಲ. ಆದರೆ ಅಲ್ಲಿ ಪ್ರವಾಸೋದ್ಯಮವನ್ನು ಅಭಿವೃದ್ಧಿ ಪಡಿಸಬೇಕೆಂಬ ಉದ್ದೇಶದಿಂದ ಸರ್ಕಾರ ಕಣ್ವ ಕೊಪ್ಪ ಗ್ರಾಮದ ಜವಳು ಮಠದ ಬಳಿ ಸುಮಾರು 129.65 ರೂ. ಗಳ ವೆಚ್ಚದಲ್ಲಿ ಯಾತ್ರಿ ನಿವಾಸವನ್ನು ನಿರ್ಮಾಣ ಮಾಡಿದೆ. ಅದರ ಕೆಲಸ ಮುಗಿದಿದ್ದು, ಇನ್ನೆರಡು ತಿಂಗಳಿನಲ್ಲಿ ಲೋಕಾರ್ಪಣೆ ಮಾಡಲು ತಯಾರಾಗಿದೆ. ಇದರ ಜೊತೆಗೆ ಓಂಕಾರ ಉಚ್ಚಂಗಿ ಮಠದ ಬಳಿ ಸುಮಾರು ರೂ. 70 ಲಕ್ಷದಲ್ಲಿ ಇನ್ನೊಂದು ಯಾತ್ರಿ ನಿವಾಸದ ಕೆಲಸ ವೇಗದಲ್ಲಿದೆ. ಇನ್ನು ಮೂರು ತಿಂಗಳಿನಲ್ಲಿ ಮುಗಿಯುತ್ತದೆ. ಜಗಳೂರಿನಲ್ಲಿ ಈ ರೀತಿ ಪ್ರವಾಸೋದ್ಯಮಕ್ಕೆ ಬೇಕಾದಂತಹ ಬೇರೆ ಬೇರೆ ಕೆಲಸ ಕಾರ್ಯಗಳನ್ನು ಮಾಡಲು ಸರ್ಕಾರ ಮುತುವರ್ಜಿ ವಹಿಸುತ್ತದೆ.

ಕಟ್ಟಡ ನಿರ್ಮಿಸುತ್ತಿರುವುದು

21 : (106)

ಶ್ರೀ ರುದ್ರೇಶ್‌ಗೌಡ ವೈ.ಎಸ್., ಬೇಲೂರು ವಿಧಾನಸಭಾ ಸದಸ್ಯರು

ಅ) ರಾಜ್ಯ ಪ್ರವಾಸೋದ್ಯಮ ಇಲಾಖೆ ವತಿಯಿಂದ ಬೇಲೂರು ಯಗಚಿ ಜಲಾಶಯದ ಬಳಿ ಅಂತರಾಷ್ಟ್ರೀಯ ಮಟ್ಟದ ವಸತಿ ಸೌಲಭ್ಯಕ್ಕಾಗಿ ಕಟ್ಟಡ ನಿರ್ಮಿಸುತ್ತಿರುವುದು ನಿಜವೇ;

ಆ) ಹಾಗಿದ್ದಲ್ಲಿ ಈ ಕಟ್ಟಡದ ಅಂದಾಜು ವೆಚ್ಚ, ಈ ಕಟ್ಟಡ ನಿರ್ಮಾಣದ ಗುತ್ತಿಗೆದಾರರು ಯಾರು ಹಾಗೂ ಕಟ್ಟಡ ನಿರ್ಮಾಣಕ್ಕೆ ನಿಗದಿಪಡಿಸಿದ ಅವಧಿ ಎಷ್ಟು ; (ಮಾಹಿತಿ ನೀಡುವುದು)

ಇ) ಈ ಕಟ್ಟಡದ ನಿರ್ಮಾಣ ಕಾಮಗಾರಿಯನ್ನು ಯಾವ ವರ್ಷ ಪ್ರಾರಂಭಿಸಲಾಗಿದೆ ;

ಈ) ಕಟ್ಟಡದ ನಿರ್ಮಾಣ ಕಾಮಗಾರಿ ಪ್ರಸ್ತುತ ಯಾವ ಹಂತದಲ್ಲಿದೆ ?

ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಗಳು)

ಅ) ಹೌದು